**<u>ಟಿ.ನರಸೀಪುರದ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ</u>**

**<u>ಸಿ.ಸಿ. ನಂ.655/2023</u>**

ಪಿರ್ಯಾದುದಾರರು : ಶ್ರೀ ರಾಮೇಗೌಡ ,
ಬಿನ್ ಲೇಟ್ ಗೋವಿಂದೇಗೌಡ,
ಸುಮಾರು 62 ವರ್ಷ,
ವಾಸಃ ಹಳೇಬೀದಿ, ತಲಕಾಡು ಗ್ರಾಮ,
ತಲಕಾಡು ಹೋಬಳಿ, ಟಿ,ನರಸೀಪುರ ತಾಲ್ಲೂಕು,
ಮೈಸೂರು ಜಿಲ್ಲೆ.

–ವಿರುದ್ಧ–

ಆರೋಪಿ : ಶ್ರೀ ಪ್ರಸನ್ನಮೂರ್ತಿ.ಕೆ,
ಬಿನ್ ಕೆಂಪಣ್ಣ,
ಸುಮಾರು 48 ವರ್ಷ,
ವಾಸಃ ಉಮ್ಮತ್ತೂರು ಗ್ರಾಮ,
ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

**<u>ಭಾ ದಂ ಪ್ರ ಸಂ ಕಲಂ.313 ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>**

ಪ್ರ:1: ಈ ಮೊಕದ್ದಮೆಯಲ್ಲಿ ವಿಚಾರಣೆ ಆಗಿರುವ ಅಭಿಯೋಜನೆ ಪರ ಸಾಕ್ಷಿದಾರರ ಹೇಳಿಕೆಯನ್ನು ಕೇಳಿಸಿಕೊಂಡಿದ್ದೀರಾ?

ಉ:

ಪ್ರ:2: ಫ್ರಾಸಾ–1 ಶ್ರೀ ರಾಮೇಗೌಡ , ಇವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ಪಿರ್ಯಾದುದಾರರಿಂದ ದಿನಾಂಕ 04.03.2023 ರಂದು ರೂ.25,000/– ಹಣವನ್ನು ನಿಮ್ಮ ದರದ್ದು ನಿಮಿತ್ತ ಅಂದರೆ ನಿಮ್ಮ ಗೃಹಕೃತ್ಯದ ಖರ್ಚಿಗಾಗಿ ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು

ಮೂರು ತಿಂಗಳ ಒಳಗಾಗಿ ಹಿಂದಿರುಗಿಸುವುದಾಗಿ ಒಪ್ಪಿಕೊಂಡಿದ್ದು, ನಿಗದಿತ ಅವಧಿಯ ನಂತರ ಸದರಿ ಸಾಲದ ಮರುಪಾವತಿಗಾಗಿ ರೂ.25,000/- ರಂತೆ ದಿನಾಂಕ 07.06.2023 ಎಂದು ನಮೂದಿಸಿದ ನಿಮ್ಮ ಬ್ಯಾಂಕ್ ಖಾತೆಯುಳ್ಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚಾಮರಾಜನಗರ ಟೌನ್, ಕಾರ್‌ಸ್ಟ್ರೀಟ್ ಶಾಖೆಯ ಚೆಕ್ ನಂ.424362 ನ್ನು ಅವರಿಗೆ ನೀಡಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:3: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ಅವರು ಸದರಿ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆಯುಳ್ಳ ಮೈಸೂರು - ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಲಿಮಿಟೆಡ್, ತಲಕಾಡು ಶಾಖೆಯ ಖಾತೆಗೆ ನಗಧೀಕರಣಕ್ಕಾಗಿ ಸಲ್ಲಿಸಿದಾಗ, ಸದರಿ ಬ್ಯಾಂಕ್ ನವರು ಚೆಕ್ಕನ್ನು ದಿನಾಂಕ 14.06.2023 ರಂದು ಮೈಸೂರಿನ ಪಂಜಾಬ್ ನ್ಯಾಷನಲ್ ಬ್ಯಾಂಕ್, ವಾಣಿ ವಿಲಾಸ ಮಾರ್ಕೇಟ್ ಶಾಖೆಗೆ ನಗಧೀಕರಣಕ್ಕಾಗಿ ಸಲ್ಲಿಸಿದಾಗ, **‘ಸಾಕಷ್ಟು ಹಣ ಇರುವುದಿಲ್ಲ (Funds Insufficient)’** ಎಂಬ ಮಾಹಿತಿಯೊಂದಿಗೆ ಚೆಕ್ ಅಮಾನ್ಯಗೊಂಡು ದಿನಾಂಕ 15.06.2023 ರಂದು ಸದರಿ ಚೆಕ್ಕು ವಾಪಸ್ಸು ಬಂದಿರುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:4: ಫ್ರಾಸಾ-1 ರವರು ಮುಂದುವರೆದು ಸಾಕ್ಷಿ ನುಡಿಯುತ್ತಾ ನಂತರ ದಿನಾಂಕ 05.07.2023 ರಂದು ನಿಮಗೆ ವಕೀಲರ ಮುಖಾಂತರ ನೋಟೀಸು ಕಳಿಸಿ ಸಾಲದ ಹಣವನ್ನು ಮರುಪಾವತಿ ಮಾಡಬೇಕೆಂದು ಕೇಳಿದ್ದು, ಆದರೆ ನೀವು ಇದುವರೆಗೂ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎನ್ನುವುದಾಗಿ ಹೇಳಿದ್ದಾರೆ. ಈ ಬಗ್ಗೆ ನಿಮಗೆ ಏನಾದರೂ ಹೇಳುವುದಿದೆಯೆ?

ಉಃ

ಪ್ರ:5:ಈ ಪ್ರಕರಣದ ವಿಚಾರವಾಗಿ ಏನಾದರೂ ಹೇಳುವುದು ಇದೆಯೆ?

ಉಃ

ಪ್ರ:6:ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ಅಥವಾ ದಾಖಲೆಗಳನ್ನು ಹಾಜರುಪಡಿಸುತ್ತೀರಾ?

ಉಃ

**[ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ ಅವರಿಗೆ ಓದಿ ಹೇಳಿದ ನಂತರ ಉತ್ತರಗಳನ್ನು ಅವರು ಹೇಳಿದಂತೆ ದಾಖಲಿಸಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.]**

ದಿನಾಂಕಃ 11.07.2024.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.,**
**ಟಿ.ನರಸೀಪುರ.**